ಶಾಲೆಯಲ್ಲಿ ಶಾಂತಿಯ ವಾತಾವರಣವಿತ್ತು, ಸ್ವಚ್ಛತೆ ಮತ್ತು ಆರೋಗ್ಯಕರ ವಾತಾವರಣ ಸಹ ಇತ್ತು. ಮೇಸ್ತ್ರು ಪಾಠವನ್ನು ಬೋಧಿಸುವಲ್ಲಿ ಮಗ್ನರಾಗಿದ್ದರು; ಅವರ ವರ್ತನೆಯಲ್ಲಿ ಬದಲಾವಣೆಯಾಗಿದ್ದು, ಈಗ ಮಕ್ಕಳ ಬಗ್ಗೆ ಅವರಿಗಿದ್ದ ಪ್ರೀತಿಯನ್ನು ನೋಡಬಹುದಿತ್ತು.

ಬಸಂತರಾಯ್ ಮೇಸ್ತ್ರು ತುಂಬಾ ವೇಗವಾಗಿ ಬದಲಾಗುತ್ತಿದ್ದರು. ಅವರಲ್ಲಿ ಪರಿವರ್ತನೆಯಾಗಿತ್ತು...

ಅವರು ಲಾಮೂ ಭಾಯಿಯವರನ್ನು ನೋಡಿದೊಡನೆಯೇ ಬಾಗಿಲ ಬಳಿಗೆ ಓಡಿ ಬಂದರು. ಅವರ ನಡಿಗೆಯಲ್ಲಿ ಅದಮ್ಯ ಸ್ಫೂರ್ತಿಯಿತ್ತು. ಅವರ ಮುಖದಲ್ಲಿ ಸಂತಸದ ಸಾಗರವೇ ಮನೆಮಾಡಿತ್ತು. ಅವರು ಲಾಮಾ ಭಾಯಿಯವರ ಬಳಿಗೆ ಬಂದು ಕೈಮುಗಿದು ಹೇಳಿದರು, 'ದಯವಿಟ್ಟು ಬನ್ನಿ ಸಾರ್...'

'ಬಸಂತರಾಯ್...' ಲಾಮೂ ಭಾಯಿ ಒಳಗೆ ಬಂದು ಹೇಳಿದರು, 'ನೀವು ನನ್ನನ್ನು ನಾಚಿಸಬೇಡಿ. ನಾನು ನಿಮ್ಮ ಸಾಹೇಬನಲ್ಲ. ನೀವು ಒಪ್ಪಿದರೆ, ನಾನು ನಿಮ್ಮ ಸಹೋದರ. ನನಗೆ ಸಾಹೇಬನಾಗುವುದರಲ್ಲಿ ಸಂತೋಷವಿಲ್ಲ, ಸಹೋದರನಾಗುವುದರಲ್ಲಿ ಸಂತೋಷವಿದೆ. 'ಸಾಹೇಬರು' ಶಬ್ದದಲ್ಲಿ ಅಧಿಕಾರವಿದೆ, ಅಹಂಕಾರವಿದೆ. ಸಹೋದರ ಎನ್ನುವುದು ನಿಮ್ಮ ಹೃದಯದ ನಿರ್ಮಲ ಬಡಿತವಾಗಿದೆ.'

ಲಾಮೂ ಭಾಯಿಯವರ ಧ್ವನಿಯಲ್ಲಿದ್ದ ಸಹಾನುಭೂತಿ ಮತ್ತು ಪ್ರೀತಿಗೆ ಮೇಸ್ತ್ರು ಅವರನ್ನು 'ಅಣ್ಣಾ' ಎಂದೇ ಕರೆಯಲಾರಂಭಿಸಿದರು.

'ಬಸಂತರಾಯ್, ನೀವು ಸಾಕಷ್ಟು ಶ್ರಮವನ್ನು ವಹಿಸಿದ್ದೀರ. ನಾನು ಗಣಿತದ ವಿಷಯದಲ್ಲಿ ಸುಧಾರಣೆ ಮಾಡಿ ಎಂದಿದ್ದೆ, ಅದರೊಂದಿಗೆ ನೀವು ಮಕ್ಕಳ ಉಚ್ಚಾರಣೆಯಲ್ಲಿ ಸಹ ಸುಧಾರಣೆಯನ್ನು ಮಾಡಿದ್ದೀರ. ಮಕ್ಕಳ ಭಾಷೆ...ಅವರಿಗಿರಬೇಕಾದ ಸಾಮಾನ್ಯ ಜ್ಞಾನ... ಹೋಗಲಿ ಬಿಡಿ, ಈ ವಿಷಯ ಅಷ್ಟೇನೂ ಮಹತ್ವದ್ದಲ್ಲ. ಆದರೆ ನಿಮ್ಮ ಶ್ರಮವಿದೆಯಲ್ಲ, ಇದರ ಬಗ್ಗೆ ಏನು ಹೇಳಬೇಕೆಂದು ತೋಚುತ್ತಿಲ್ಲ...ನಿಮ್ಮ ಶ್ರಮವನ್ನು ಮೆಚ್ಚಲೇಬೇಕು.'

ಮೇಸ್ತ್ರು ಮುಖದಲ್ಲಿನ ಈ ಹಿಂದಿನ ಭಾವನೆಗಳಲ್ಲಿ ಪರಿವರ್ತನೆ ಬಂದಿತ್ತು. ಈ ಮೊದಲಿನ ಮುಖದಲ್ಲಿ ದ್ವೇಷ, ನಿರಾಸೆ, ಜುಗುಪ್ಸೆಗಳಿದ್ದವು; ಆದರೆ ಇಂದು ಅದೇ ಮುಖದಲ್ಲಿ ಆಸೆ, ಮಮಕಾರ, ಉತ್ಸಾಹ ಮತ್ತು ಕೋಮಲ ಭಾವನೆಗಳಿದ್ದವು.

ನಿರೀಕ್ಷಕರಾದ ಲಾಮೂ ಭಾಯಿ ಈ ಬಾರಿ ಯಾವುದೇ ಸಲಹೆಯನ್ನು ಕೊಡಲಿಲ್ಲ.

'ಅಣ್ಣಾ,' ಬಸಂತರಾಯ್ ಮೇಸ್ತ್ರು ಹೇಳಿದರು, 'ನನಗೆ ಈಗಲೂ ನನ್ನ ಶಾಲೆಯಲ್ಲಿ ಕೊರತೆಯಿದೆ ಎಂದು ಅನ್ನಿಸುತ್ತದೆ...ಕೊರತೆ ಏನೆಂದು ನನಗೆ ತಿಳೀತಿಲ್ಲ...ಈ ಬಗ್ಗೆ ದಯವಿಟ್ಟು ನೀವೇ ಹೇಳಿ.'

'ಇಲ್ಲ-ಇಲ್ಲ, ಅಂಥದ್ದೇನಿಲ್ಲ. ಎಲ್ಲವೂ ಸರಿಯಾಗಿದೆ. ಚೆನ್ನಾಗಿದೆ. ಆದರೂ ನಿಮಗೆ ಕೊರತೆಯಿದೆ ಎಂದು ಅನ್ನಿಸಿದರೆ, ನೀವು ಮಕ್ಕಳನ್ನು ಅಕ್ಕಪಕ್ಕದ ಸ್ಥಳಗಳಿಗೆ ಕರೆದುಕೊಂಡು ಹೋಗಿ ಬನ್ನಿ...ಪ್ರವಾಸ ಮಾಡಿಸಿ...ಕಾಲ್ನಡಿಗೆಯಲ್ಲಿ ಸಹ ಪ್ರವಾಸ ಕೈಗೊಳ್ಳಿ. ಮಕ್ಕಳಿಗೆ ಹೊಸತನ್ನು ಪರಿಚಯಿಸಿ. ಅವರಲ್ಲಿ ಯೋಚಿಸುವ ಸಾಮರ್ಥ್ಯವನ್ನು ಬೆಳೆಸಿ. ನಿಮಗೂ ಸಂತೋಷವಾಗುತ್ತದೆ. ನಿಮಗೆ ಪ್ರಕೃತಿಯ ಬಗ್ಗೆ ಗೊತ್ತೇ ಇದೆ. ಹೀಗೆ ಮಾಡಿದಾಗ ನಿಮ್ಮ ಮನಸ್ಸು ಸಹ ಅರಳುತ್ತದೆ... ಬರುತ್ತದೆ... ಪ್ರಕೃತಿಯಲ್ಲಿರುವುದರಿಂದ ಮನಸ್ಸಿನಲ್ಲಿ ಉತ್ಸಾಹ ಜಾಗೃತಗೊಳ್ಳುತ್ತದೆ. ಪಾಠಶಾಲೆಯ ಈ ಗೋಡೆಗಳು ವ್ಯರ್ಥ, ಇವು ಜಡವಾಗಿದ್ದು, ನಿರರ್ಥಕವಾಗಿವೆ...'

ಬಸಂತರಾಯ್ ಮೇಸ್ತ್ರು ಮಂತ್ರಮುಗ್ಧರಾಗಿ ಲಾಮೂ ಭಾಯಿಯವರ ಮಾತುಗಳನ್ನು ಕೇಳಿದರು.

ಲಾಮೂ ಭಾಯಿಯವರು ಶಾಲೆಯಿಂದ ಹೋದ ನಂತರ ಮೇಸ್ತ್ರು ಅಂತರ್ಮುಖಿಯಾದರು.

ಎರಡು ತಿಂಗಳುಗಳು ಕಳೆದವು.

ಲಾಮೂ ಭಾಯಿ ಶಾಲೆಗೆ ಬರಲಿಲ್ಲ. ಮೇಸ್ತ್ರು ಅಶಾಂತತೆಯನ್ನು ಅನುಭವಿಸಿದರು.

ಮೂರನೆಯ ತಿಂಗಳು ಸಹ ಕಳೆಯಿತು... ನಿರೀಕ್ಷಕರಾದ ಲಾಮೂ ಭಾಯಿಯವರು ಶಾಲೆಗೆ ಬರಲಿಲ್ಲ...ಮೇಸ್ತ್ರಿಗೆ ಚಿಂತೆ ಕಾಡಿತು...ನಾಲ್ಕನೆಯ ಮತ್ತು ಐದನೆಯ ತಿಂಗಳು ಸಹ ಕಳೆಯಿತು. ಅದೊಂದು ದಿನ ರಾತ್ರಿ ವೇಳೆಯಲ್ಲಿ ಲಾಮಾ ಭಾಯಿ ಬಂದರು...ಬಸಂತರಾಯ್ ಮೇಸ್ತ್ರಿಗೆ ತುಂಬಾ ಸಂತೋಷವಾಯಿತು.

ಈಗ ಶಾಲೆ ನಿಜವಾದ ಅರ್ಥದಲ್ಲಿ ಶ್ರೇಷ್ಠ ಶಾಲೆಯಾಗಿತ್ತು. ಅವರು ಬಸಂತರಾಯ್ ಮೇಸ್ತ್ರನ್ನು ಎವೆಯಿಕ್ಕದೆ ನೋಡಿದರು. ಇವರನ್ನು ಶಿಕ್ಷಿಸಲು